ಕ್ರ. ಸಂ.	ಕಾಮಗಾರಿಗಳ ವಿವರ	ಆಡಳಿತಾತ್ಮಕ ಅನುಮೋದನೆ ನೀಡಿದ ಮೊತ್ತ	ಬಿಡುಗಡೆ ಮಾಡಿದ ಮೊತ್ತ	ಷರಾ
ಶೇ.60ರ ಕಾರ್ಯಕ್ರಮ				
1)	ಬೈರಮಟ್ಟಿಕೆರೆ ಅಭಿವೃದ್ಧಿ ಹಾಗೂ ದುರಸ್ತಿ	1.00	1.00	
2)	ಲಾಯಗುಂಡ ಕೆರೆ ದುರಸ್ತಿ ಹಾಗೂ ಹೂಳು ತೆಗೆಯುವುದು	2.00	-	
ಶೇ.40ರ ಕಾರ್ಯಕ್ರಮ				
1)	ಬೈರಮಟ್ಟಿ ಇಂದ ವೆಂಕಟೇಶ್ವರ ದೇವಸ್ಥಾನದವರೆಗೆ ರಸ್ತೆಗೆ ಗರಡು ಹೂಡಿಕೆ ಹಾಗೂ ಖಡೀ ಲೆವೆಲ್ ಕಿಮೀ 2.00 ಕಿಮೀ.	2.00	2.00	
	ಒಟ್ಟು	5.00	3.00	

ಉಳಿದ 1.50 ಲಕ್ಷ ರೂ.ಗಳಿಗೆ ಸಂಬಂಧಿಸಿದಂತೆ ಲಿಂಗಾಪುರ ಹಾಗೂ ಕೊಟ್ನಹಳ್ಳಿ ಗ್ರಾಮದಲ್ಲಿ ನಾಲಾಬದು: ಚೆಕ್‌ಡ್ಯಾಂ ಕಾಮಗಾರಿಗಳಿಗೆ ಯೋಜನೆ ಮತ್ತು ಅಂದಾಜು ಪಟ್ಟಿಯು ಇತ್ತೀಚಿಗೆ ಬಂದಿದ್ದು, ಕೂಡಲೇ ಆಡಳಿತಾತ್ಮಕ ಅನುಮೋದನೆ ನೀಡಿ ಅನುದಾನವನ್ನು ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಆ) ಸದರಿ ಕಾಮಗಾರಿಗಳು ಪ್ರಗತಿಯ ಹಂತದಲ್ಲಿವೆ.

ಇ) ಕೆಲವು ಕಾಮಗಾರಿಗಳಿಗೆ ಯೋಜನೆ ಮತ್ತು ಅಂದಾಜು ಪತ್ರಿಕೆಗಳು ಸಕಾಲದಲ್ಲಿ ಸಲ್ಲಿಸದಿರುವುದರಿಂದ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ತಡವಾಗಿರುತ್ತದೆ.

ವಿಷಯ: ರಾಜ್ಯದಲ್ಲಿರುವ ಕಾರಾಗೃಹಗಳು.

901 (1232)

ಶ್ರೀ ಎನ್.ರಾಜಣ್ಣ (ಭಾರತೀನಗರ): ಮಾನ್ಯ ಕಾರಾಗೃಹ ಗೃಹರಕ್ಷಕ ದಳ ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು

ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ಕಾರಾಗೃಹಗಳ ಒಟ್ಟು ಸಂಖ್ಯೆ ಎಷ್ಟು?

ಆ) ಇವುಗಳ ಪೈಕಿ ಯಾವ ಯಾವ ಕಾರಾಗೃಹಗಳನ್ನು ಮೇಲ್ದರ್ಜೆಗೆ ಏರಿಸಲು ಸರ್ಕಾರದವರು ನಿರ್ಧರಿಸಿದ್ದಾರೆ?

ಇ) ರಾಜ್ಯದ ಕಾರಾಗೃಹಗಳ ಆಡಳಿತ ವ್ಯವಸ್ಥೆಯಲ್ಲಿ ಸುಧಾರಣೆ ತರಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ವಿ.ಸೋಮಣ್ಣ (ಕಾರಾಗೃಹ, ಗೃಹ ರಕ್ಷಕ ದಳ, ನಾಗರೀಕ ರಕ್ಷಣೆ ಮತ್ತು ಸೈನಿಕ ಕಲ್ಯಾಣ ರಾಜ್ಯ ಸಚಿವರು):

ಅ) 96.

ಆ) ಜಿಲ್ಲಾ ಕಾರಾಗೃಹ, ಮಂಗಳೂರು ಕೇಂದ್ರ ಕಾರಾಗೃಹವನ್ನಾಗಿಯೂ, ವಿಶೇಷ ಉಪ ಕಾರಾಗೃಹ ದಾವಣಗೆರೆ ಹಾಗೂ ತಾಲ್ಲೂಕು ಉಪ ಕಾರಾಗೃಹಗಳಾದ ಬಾಗಲಕೋಟೆ, ಚಾಮರಾಜನಗರ, ಗದಗ, ಉಡುಪಿ, ಮತ್ತು ಹಾವೇರಿ ಗಳನ್ನು ಜಿಲ್ಲಾ ಕಾರಾಗೃಹಗಳನ್ನಾಗಿ ಮೇಲ್ದರ್ಜೆಗೆ ಏರಿಸಲು ಉದ್ದೇಶಿಸಲಾಗಿದೆ.

ಇ) 1. ಕಾರಾಗೃಹಗಳಲ್ಲಿ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

2. ಪೊಲೀಸ್ ಸಿಬ್ಬಂದಿ ಮತ್ತು ಕಂದಾಯ ಇಲಾಖೆಯ ಶಿರಸ್ತೆದಾರರು ಪದನಿಮಿತ್ತ ಅಧೀಕ್ಷಕರ ಆಡಳಿತದಲ್ಲಿರುವ 43 ತಾಲ್ಲೂಕು ಉಪ ಕಾರಾಗೃಹಗಳನ್ನು ಹಂತ ಹಂತವಾಗಿ ಇಲಾಖೆಯ ನೇರ ಆಡಳಿತಕ್ಕೆ ತೆಗೆದುಕೊಳ್ಳಲು ಕ್ರಮ ಕೈಗೊಳ್ಳಲಾಗುತ್ತಿದೆ.

3. ಕಾರಾಗೃಹಗಳ ಉಪ ಮಹಾನಿರೀಕ್ಷಕರ ಒಂದು ಹುದ್ದೆ ಸೇರಿದಂತೆ 258 ಹೊಸ ಹುದ್ದೆಗಳನ್ನು ಸೃಜಿಸಲಾಗಿದೆ.

4. ಕಾರಾಗೃಹಗಳ ಆಧುನೀಕರಣ ಯೋಜನೆಯಡಿ ಭಾರತ ಸರ್ಕಾರದ ಹೊಂದಾಣಿಕೆ ಅನುದಾನದ ಮೂಲಕ ಬಾಕಿ ಉಳಿದಿರುವ ಎಲ್ಲಾ ಕಾರಾಗೃಹಗಳಿಗೆ ಜೀಪುಗಳು, ಮೋಟಾರು ಸೈಕಲ್, ಅಂಬ್ಯುಲೆನ್ಸ್ ವಾಹನ, ಎಕ್ಸ್‌ರೇ ಯೂನಿಟ್‌ಗಳು, ಇಸಿಜಿ ಮೆಶಿನು, ಚಿಕಿತ್ಸಾ ಪ್ರಯೋಗಾಲಯ ಉಪಕರಣಗಳು, ಹಗಲು ರಾತ್ರಿ ಬೈನಾಕ್ಯುಲರ್‌ಗಳು, ಸೋಲಾರ್ ನೀರು ಕಾಯಿಸುವ ಉಪಕರಣ ನೀಡುವುದು ಹಾಗೂ ಕಟ್ಟಡಗಳ ಸುಧಾರಣೆ ಮಾಡಲು ಕ್ರಮ ಕೈಗೊಳ್ಳಲಾಗುತ್ತಿದೆ.